ಸಿ.ಸಿ. ನಂಬ್ರಃ 2121/2019 ಪ್ರಾಸಾಃ1

ದಿನಾಂಕಃ 02.04.2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ ದಿಃ 14-03-2025ರ ಆದೇಶದ ಮೇರೆಗೆಃ**

ದಿಃ 31-05-2019 ರಂದು ಮನೆಯ ಬಳಿ ಪೊಲೀಸರು ಪಂಚನಾಮೆಗೆ ಬಂದಿದ್ದು ನಾನು ಜಾಗವನ್ನು ತೋರಿಸಿದ್ದು, ಅಲ್ಲಿ ಮುಮಾ1 ರಿಂದ 3ನ್ನು ತೋರಿಸಿದ್ದು, ಅವುಗಳನ್ನು ವಶಕ್ಕೆ ಪಡೆದು ಕ್ರಮವನ್ನು 11-30 ರಿಂದ 12-15ರವರೆಗೆ ಜರುಗಿಸಿ ಪೋಟೋ ತೆಗೆದಿರುತ್ತಾರೆ. ಸಾಕ್ಷಿ ನಿಪಿ-3 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸದ್ರಿ ಕ್ರಮವನ್ನು ಜರುಗಿಸುವ ವೇಳೆಗೆ ಚಾಸಾ-2 ಮತ್ತು 7ರವರು ಹಾಜರು ಇದ್ದರು. ಅವರು ಸದ್ರಿ ದಾಖಲೆಗೆ ಸಹಿ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಹೆಚ್ ಆರ್ ಎಸ್ ರವರಿಂದಃ**

ಘಟನೆಯ ಹಿನ್ನೆಲೆಯಲ್ಲಿ ನಾನು 3 ದಿನ ಆಸ್ಪತ್ರೆಗೆ ದಾಖಲಾಗಿದ್ದೆ. ಆಸ್ಪತ್ರೆಗೆ ದಾಖಲಾಗಿದ್ದ ದಿನವೇ ಪ್ರಜ್ಞೆ ಬಂದಿರುತ್ತದೆ. ಪೊಲೀಸರು ದಿಃ 31-05-2019 ರಂದು ಬಂದಿರುತ್ತಾರೆ. ಘಟನೆಗೆ ಸಂಬಂಧಿಸಿದಂತೆ 2-3 ಸಹಿಗಳನ್ನು ಠಾಣೆಯಲ್ಲಿ ಹಾಕಿರುತ್ತೇನೆ. ಅದನ್ನು ಬಿಟ್ಟು ಘಟನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನಿಪಿ-3 ರಲ್ಲಿ ಏನೆಲ್ಲಾ ಬರೆದಿದ್ದಾರೆ ಎಂದು ಓದಿ ಹೇಳಿಲ್ಲ. ಆದ್ದರಿಂದ ಅದರಲ್ಲಿ ಏನು ಬರೆದಿದೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ಸದ್ರಿ ದಿನ ಇಬ್ಬರು ಪೊಲೀಸರು ಬಂದಿದ್ದರು. ನನ್ನ ಸಮಕ್ಷಮ ಒಬ್ಬ ಪೊಲೀಸರು ಸಹಿ ಮಾಡಿರುತ್ತಾರೆ. ಮರದ ದಿಮ್ಮಿ ಘಟನಾ ಸ್ಥಳದಲ್ಲಿ ಇತ್ತು. ಅದರ ಉದ್ದ ಮತ್ತು ಅಳತೆಯನ್ನು ಹೇಳಲಾಗುವುದಿಲ್ಲ. ಜಾಕ್ ನಲ್ಲಿ ರಕ್ತದ ಕಲೆ ಇದ್ದ ಬಗ್ಗೆ ನನಗೆ ತಿಳಿದಿಲ್ಲ. ಹಸಿರು ಬಣ್ಣದ ಗಾಜಿನ ಬಳೆಯಾಗಿರುತ್ತದೆ. ಸ್ಥಳದ ಚೆಕ್ಕು ಬಂಧಿಗಳನ್ನು ಹೇಳಲಾಗುವುದಿಲ್ಲ.

ನಾನು ಸದ್ರಿ ದಿನ ಸ್ಥಳದಲ್ಲಿ ಇರದೆ ಠಾಣೆಗೆ ಹೋಗಿ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಸ್ಥಳದಲ್ಲಿ ಯಾವುದೇ ಪಂಚನಾಮೆ ಜರುಗಿಸಿ ಮುಮಾ1 ರಂದ 3ನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ